ದಿಃ **12-06-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ **1(ಎ), (ಬಿ)** ಮತ್ತು **(ಇ)** ರವರ ಪರ ವಕೀಲರವರಿಂದಃ</u>

1) ನನಗೆ ಮೃತ ಪ್ರತಿವಾದಿ 1 ರವರು ನಮ್ಮೂರಿನವರಾಗಿರುವುದರಿಂದ ಗೊತ್ತು. ಕ್ರಯ ಕರಾರು ಪತ್ರವನ್ನು ಬರೆಯಲು ಮೃತ ಪ್ರತಿವಾದಿ 1 ರವರು ಮಾಹಿತಿ ನೀಡಿರುತ್ತಾರೆ. ಮಾಲದಿನ್ನಿ ಗ್ರಾಮದ ರಿಸ ನಂಬರ 1081 ಇದು ಈಗ 1081/1 ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂಬರ ಬದಲಾದ ನಂತರ ವಾದ ಪತ್ರದಲ್ಲಿ 1081/1 ಎಂದು ನಾನು ತಿದ್ದುಪಡಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಹಾಗೆ ವಾದಪತ್ರ ತಿದ್ದುಪಡಿ ಮಾಡಿಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

2) ದಾವಾ ಸ್ವತ್ತು ಮಾಲದಿನ್ನಿ ಗ್ರಾಮದ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಚೆನ್ನಪ್ಪಾ ಭೀಮಪ್ಪಾ ಹೊನಕುಪ್ಪಿ ರವರ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ಸಣ್ಣಪ್ಪಾ ಸಳ್ಳಪ್ಪಾ ಬಂಡಿ ರವರ ಜಮೀನು ಇರುತ್ತದೆ. ದಕ್ಷಿಣಕ್ಕೆಃ ಪ್ರತಿವಾದಿಯರಿಗೆ ಸೇರಿದ ಉಳಿದ ಜಮೀನು ಹಾಗೂ ಮಾಲದಿನ್ನಿ ಗ್ರಾಮದ ಗೌಂವಠಾಣ ಜಾಗವಿರುತ್ತದೆ. ಉತ್ತರಕ್ಕೆಃ ನಮ್ಮ ಜಮೀನು ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ನಮ್ಮ ಜಮೀನು ಮೂಲತಃ ಪ್ರತಿವಾದಿಯರಿಗೆ ಸೇರಿದ ಜಮೀನು ಆಗಿತ್ತು ಎಂದರೆ ಸರಿ. ದಾವಾ ಸ್ವತ್ತಿನ ಜಮೀನಿನ ಉತ್ತರಕ್ಕೆ ಇರುವ ಪ್ರತಿವಾದಿಯರ ಜಮೀನಿನಲ್ಲಿ ಈಗಲೂ ಸಹ ಪ್ರತಿವಾದಿಯರೇ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾವು ಇರುತ್ತೇವೆ ಎಂದು ನುಡಿಯುತ್ತಾರೆ.

3) ದಾವಾ ಸ್ವತ್ತಿನ ಕುರಿತು ಮಾತುಕತೆಯು ಮೃತ ಪ್ರತಿವಾದಿ 1 ರವರ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು, ಪ್ರತಿವಾದಿ1, ಹಿರಿಯರಾದ ಉಪ್ಪಾರಟ್ಟಿ ಗ್ರಾಮದ ಬಸಪ್ಪಾ ಮದಭಾವಿ , ಲಕ್ಕಪ್ಪಾ ಉದ್ದಪ್ಪಾ ಜುಗ್ಯಾಗೋಳ, ಪ್ರತಿವಾದಿ 1 ರವರ ತಾಯಿ, ಅಕ್ಕ ಹಾಗೂ ಹೆಂಡತಿ ಇದ್ದರು. ಮೇಲೆ ತಿಳಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ.

4) ಪ್ರತಿವಾದಿ 1 ರವರ ತಾಯಿಯಾದ ಸುನವ್ವಾ ವೆಂಕಟರಾಮ ಹೊನಕುಪ್ಪಿ ಮತ್ತು ಪ್ರತಿವಾದಿ 1 ರವರ ತಂಗಿಯಾದ ಮಹಾದೇವಿ ರುದ್ರಪ್ಪಾ ಗಂಗಪ್ಪಗೋಳ ರವರು ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇವೆ ಎಂದು ಕರ್ನಾಟಕ ಟೈಮ್ಸು ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿದ ಮೇರೆಗೆ ದಾವಾ

ಸ್ವತ್ತನ್ನು ಮಾರಾಟಕ್ಕೆ ತೆಗೆದಿರುತ್ತಾರೆ ಎಂಬುವುದು ನನಗೆ ಗೊತ್ತಾಗಿರುತ್ತದೆ. ಪ್ರತಿವಾದಿ 1 ಆತನ ತಾಯಿ ಮತ್ತು ಸಹೋದರಿ ನಮ್ಮ ಮನೆಗೆ ಬಂದು ತಮ್ಮ ಕುಟುಂಬದ ಅವಶ್ಯಕತೆಗಳಿಗಾಗಿ ತಾವು ದಾವಾ ಸ್ವತ್ತನ್ನು ಮಾರಾಟಕ್ಕೆ ತೆಗೆದಿರುತ್ತೇವೆ. ದಾವಾ ಸ್ವತ್ತನ್ನು ಖರೀದಿ ಮಾಡಿರಿ ಎಂದು ಕೇಳಿಕೊಂಡು ಪ್ರತಿವಾದಿ 1 ಮತ್ತು ಆತನ ತಾಯಿ ಮತ್ತು ಸಹೋದರಿ 2010 ರ ಜುಲೈ ತಿಂಗಳಿನಲ್ಲಿ ನಮ್ಮ ಮನೆಗೆ ಬಂದು ಕೇಳಿಕೊಂಡಿದ್ದರು. ಸದರಿ ದಿನದಂದು ದಾವಾ ಸ್ವತ್ತಿನ ಕುರಿತು ಯಾವುದೇ ವ್ಯವಹಾರ ಆಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಂತರ 20 ರಿಂದ 25 ದಿನಗಳು ಆದ ಮೇಲೆ ದಾವಾ ಸ್ವತ್ತಿನ ಕುರಿತು ಮಾತುಕತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಖರೀದಿಸಲು ನಾನು ರೂ. 1,76,000/- ಗಳಿಗೆ ಕೇಳಿರುತ್ತೇನೆ. ಮೃತ ಪ್ರತಿವಾದಿ 1 ಹಾಗೂ ಆತನ ತಾಯಿ ಮತ್ತು ಸಹೋದರಿ ನಾನು ಕೇಳಿದ ಮೊತ್ತಕ್ಕೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿರುತ್ತಾರೆ. ನನ್ನ ಜೊತೆಗೆ ಬಂದ ಹಿರಿಯರು ಮತ್ತು ಪ್ರತಿವಾದಿ 1 ರವರ ಹಿರಿಯರು ಸಹ ದಾವಾ ಸ್ವತ್ತಿನ ಮೌಲ್ಯವನ್ನು ರೂ. 1,76,000/- ಮಾಡಿದ್ದರು. ಅದಕ್ಕೆ ನಾನು ಹಾಗೂ ಪ್ರತಿವಾದಿ 1 ಹಾಗೂ ಆತನ ತಾಯಿ ಮತ್ತು ಸಹೋದರಿ ಒಪ್ಪಿಕೊಂಡಿದ್ದೇವು ಎಂದು ನುಡಿಯುತ್ತಾರೆ.

5) ದಾವಾ ಸ್ವತ್ತಿನ ಮಾತುಕತೆ ಆಗುವ ಪೂರ್ವದಲ್ಲಿಯೇ ಪ್ರತಿವಾದಿ 1 ರವರ ತಾಯಿ ಮತ್ತು ತಂಗಿ ದಾವಾ ಸ್ವತ್ತನು ಮಾರಾಟ ಮಾಡುವ ಜಾಹೀರಾತನ್ನು ದಿಃ 26-02-2009 ರಂದು ದಿನಪತ್ರಿಕೆಯಲ್ಲಿ ತಿಳಿಸಿದ್ದರು. ನಾನು ಪ್ರತಿವಾದಿ 1 ಮತ್ತು ಆತನ ತಾಯಿ ಮತ್ತು ಸಹೋದರಿಗೆ ದಾವಾ ಸ್ವತ್ತಿನ ಕುರಿತು ರೂ. 1,76,000/- ಗಳಿಗೆ ಮಾತುಕತೆ ಆದ ದಿನದಂದು ಪ್ರತಿವಾದಿ 1 ರವರ ಮನೆಯಲ್ಲಿ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಅದೇ ದಿನ ದಾವಾ ಸ್ವತ್ತಿನ ಕುರಿತು ಕ್ರಯ ಕರಾರು ಪತ್ರ ಮಾಡಿಕೊಳ್ಳುವುದಕ್ಕಾಗಿ ಉಪನೋಂದಣಾಧಿಕಾರಿಗಳ ಕಚೇರಿ ಗೋಕಾಕಿಗೆ ಬಂದಿದ್ದು ಕ್ರಯ ಕರಾರು ಪತ್ರವಾದ ದಿನದಂದು ನಾನು ಪ್ರತಿವಾದಿ 1 ರವರಗೆ ರೂ. 1,48,000/- ಮುಂಗಡ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕುರಿತು ನೋಂದಾಯಿತ ಕ್ರಯ ಕರಾರು ಪತ್ರ ಆಗುವ ಸಮಯದಲ್ಲಿ ಪ್ರತಿವಾದಿ 1 ರವರ ತಾಯಿ ಮತ್ತು ತಂಗಿ ಬಂದಿರಲಿಲ್ಲ ಎಂದರೆ ಸರಿ. ನಾನು ನಮ್ಮ ಮನೆಯಲ್ಲಿ ಕೂಡಿಟ್ಟ ಹಣವನ್ನು ಪ್ರತಿವಾದಿ 1 ರವರಿಗೆ ನೀಡಿರುತ್ತೇನೆ.

6) ದಾವಾ ಸ್ವತ್ತಿನ ಕುರಿತು ಕ್ರಯ ಕರಾರು ಪತ್ರವಾಗುವ ಸಮಯದಲ್ಲಿ ನನ್ನ ಮತ್ತು ಪ್ರತಿವಾದಿ 1 ರವರ ಮಧ್ಯ ದಾವಾ ಸ್ವತ್ತಿನ ಕುರಿತು ಕ್ರಯ ಕರಾರು ಪತ್ರವಾದ 2 ವರ್ಷಗಳ ಒಳಗಾಗಿ ಉಳಿದ ಹಣ ನೀಡಿ ಶುದ್ಧ ಕ್ರಯ ಪತ್ರ ಮಾಡಿಕೊಳ್ಳುವ ಕರಾರು ಆಗಿತ್ತು. ದಾವಾ ಸ್ವತ್ತಿನ ಕ್ರಯ ಕರಾರು ಪತ್ರ ಮಾಡಿಕೊಳ್ಳಲು ನಾವು ಗೋಕಾಕಿನ ಉಪನೋಂದಣಾಧಿಕಾರಿಗಳ ಕಚೇರಿಗೆ ಬಂದಾಗ ಮಧ್ಯಾಹ್ನ

ಅಂದಾಜು 3-00 ಗಂಟೆ ಆಗಿತ್ತು. ತದನಂತರ ಕ್ರಯ ಕರಾರು ಪತ್ರ ನೋಂದು ಮಾಡಿಕೊಳ್ಳಲು ಅಂದಾಜು 1 ಗಂಟೆ ಯವರೆಗೆ ಸಮಯ ಆಗಿರುತ್ತದೆ ಮಧ್ಯಾಹ್ನ 4-00 ಗಂಟೆಗೆ ದಾವಾ ಸ್ವತ್ತಿನ ಕುರಿತು ಕ್ರಯ ಕರಾರು ಪತ್ರ ನೋಂದಣಿಯಾಗಿರುತ್ತದೆ. ಸದರಿ ದಿನದಂದು ದಸ್ತು ಬರಹಗಾರರಾದ ಹಿರೇಮಠ ರವರ ಕಚೇರಿಗೆ ಬಂದಾಗ ಮಧ್ಯಾಹ್ನ 12-00 ಗಂಟೆ ಸಮಯ ಆಗಿರಬಹುದು. ದಸ್ತು ಬರಹಗಾರರ ಕಚೇರಿಗೆ ನಾನು, ಮೃತ ಪ್ರತಿವಾದಿ 1 ಹಾಗೂ ಹಿರಿಯರಾದ ಬಸಪ್ಪಾ ಮದಭಾವಿ, ಲಕ್ಕಪ್ಪಾ ಜುಗ್ಯಾಗೋಳ ಬಂದಿದ್ದೇವು. ಸದರಿ ಎಲ್ಲ ಸಂಗತಿಗಳನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ದಾವಾ ಸ್ವತ್ತು ಪ್ರತಿವಾದಿ 1 ರವರ ಹಿರಿಯರ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ 1 ರವರಿಗೆ ಯಾವ ಆಧಾರದ ಮೇಲಿಂದ ಬಂದಿರುತ್ತದೆ ಎಂದು ನಾನು ದಾಖಲೆಗಳನ್ನು ತೆಗೆಯಿಸಿ ನೋಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಈಗ ಮೃತ ಪ್ರತಿವಾದಿ 1 ರವರ ವಾರಸುದಾರರಾದ ಪ್ರತಿವಾದಿ 1(ಎ) ರಿಂದ 1(ಇ) ರವರು ಇರುತ್ತಾರೆ ಎಂದರೆ ಸರಿ. ಅವರೇ ವ್ಯವಸಾಯ ಮಾಡಿ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಕಬ್ಬು ಮತ್ತು ಗೋವಿನಜೋಳ ಬೆಳೆ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ಕೇವಲ ಗೋವಿನಜೋಳ ಬೆಳೆಯುತ್ತಾರೆ ಕಬ್ಬು ಬೆಳೆಯುವುದಿಲ್ಲ ಎಂದು ನುಡಿಯುತ್ತಾರೆ.

8) ದಾವಾಸ್ವತ್ತು ಮಾಲದಿನ್ನಿ ಗ್ರಾಮಕ್ಕೆ ತಾಗಿಕೊಂಡು ಇರುವುದರಿಂದ ದಾವಾ ಸ್ವತ್ತಿನ ಪಕ್ಕದಲ್ಲಿ ಪ್ಲಾಟುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯ ಪ್ರತಿ ಎಕರೆಗೆ ರೂ. 30 ಲಕ್ಷಕ್ಕಿಂತ ಮೇಲ್ಪಟ್ಟು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ಕ್ರಯ ಕರಾರು ಪತ್ರವಾಗಿರುತ್ತದೆ ಎಂದು ಹೇಳುವ ದಿನದಂದು ದಾವಾ ಸ್ವತ್ತಿನ ಮೌಲ್ಯ ಪ್ರತಿ ಎಕರೆಗೆ ರೂ. 15 ಲಕ್ಷದಷ್ಟು ಆಗಿತ್ತು ಎಂದರೆ ಸರಿಯಲ್ಲ.

9) ಕ್ರಯ ಕರಾರು ಪತ್ರ ಆಗುವ ಸಮಯದಲ್ಲಿ ದಾವಾ ಸ್ವತ್ತಿನ ಮೇಲೆ ಬ್ಯಾಂಕಿನ ಸಾಲ ಇತ್ತು ಎಂದರೆ ಸರಿ. ಎಷ್ಟು ಸಾಲ ಇತ್ತು ಎಂಬುವುದು ನನಗೆ ಗೊತ್ತಿರುವುದಿಲ್ಲ. ಇವತ್ತೀನವರೆಗೂ ಸಹ ದಾವಾ ಸ್ವತ್ತಿನ ಮೇಲೆ ಎಷ್ಟು ಸಾಲ ಇರುತ್ತದೆ ಎಂಬುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ.

10) ನಿಪಿ-1 ರ ಕ್ರಯ ಕರಾರು ಪತ್ರವಾದ 2 ವರ್ಷಗಳಿಗೆ ಒಂದು ತಿಂಗಳು ಕಡಿಮೆ ಇದ್ದಾಗ ನಾನು ಮೃತ ಪ್ರತಿವಾದಿ 1 ರವರ ಬಳಿ ಹೋಗಿ ಖರೀದಿ ಪತ್ರ ಬರೆದುಕೊಡಲು ಕೇಳಿಕೊಂಡಿರುತ್ತೇನೆ.

ನಿಖರವಾಗಿ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ನೆನಪಿಲ್ಲ. 2010 ನೇ ಸಾಲಿನಲ್ಲಿ ಜಮೀನುಗಳ ಖರೀದಿಯ ಕಾಲಕ್ಕೆ ನಕ್ಷೆಯ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

11) ಮೃತ ಪ್ರತಿವಾ 1 ಮತ್ತು ಆತನ ಹೆಂಡತಿಯ ಮಧ್ಯ ಆಗಾಗ ಮೇಲಿಂದ ಮೇಲೆ ಜಗಳಗಳು ಆಗುತ್ತಿದ್ದವು ಎಂದರೆ ಸರಿಯಲ್ಲ. ಮೃತ ಪ್ರತಿವಾದಿ 1 ರವರು ಮದ್ಯಪಾನ ಸೇವನೆ ಮಾಡುವ ದುಶ್ಚಟಕ್ಕೆ ಅಂಟಿಕೊಂಡಿದ್ದ ಎಂದರೆ ಸರಿಯಲ್ಲ. ಸದರಿ ಸರಾಯಿ ಕುಡಿದು ಕುಡಿದು ಪ್ರತಿವಾದಿ 1 ರವರು ಅನಾರೋಗ್ಯಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಮೃತನಾಗಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಸರಾಯಿ ಕುಡಿಯುತ್ತಿರುವುದರಿಂದ ಅದರ ಗೈರು ಫಾಯಿದೆ ತೆಗೆದುಕೊಂಡು ಪ್ರತಿವಾದಿ 1 ರವರು ಸರಾಯಿ ನಶೆಯಲ್ಲಿ ಇದ್ದಾಗ ನಾನು ನಿಪಿ-1 ರ ಕ್ರಯ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯ ಕರಾರು ಪತ್ರದಲ್ಲಿ ತಿಳಿಸಿದ ಮೊತ್ತಕ್ಕೆ ಯಾವುದೇ ಮಾತುಕತೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಅದರಂತೆ ನಿಪಿ-1 ರಲ್ಲಿ ತಿಳಿಸಿದ ರೂ. 1,48,000/- ಹಣವನ್ನು ನಾನು ಪ್ರತಿವಾದಿ 1 ರವರಿಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ.

12) ಪ್ರತಿವಾದಿ 1 ರವರ ಕಡೆಯಿಂದ ಆಗಾಗ ಸ್ವಲ್ಪ ಸ್ವಲ್ಪ ಹಣಕೊಟ್ಟು ದಿನಾಂಕಃ 03-12-2009 ರಂದು ಪ್ರತಿವಾದಿ 1 ರವರಿಗೆ ಸೇರಿದ 1 ಎಕರೆ 28 ಗುಂಟೆ ಜಮೀನನ್ನು ನಾನು ಬರೆಸಿಕೊಂಡಿದ್ದೆ ಎಂದರೆ ಸಾಕ್ಷಿಯು ದಿಃ03-12-2009 ರಂದು ಪ್ರತಿವಾದಿ 1 ರವರಿಗೆ ರೂ. 2,45,000/- ಹಣವನ್ನು ಆತನ ಹೆಂಡತಿ, ತಂಗಿ ಮತ್ತು ತಾಯಿಯ ಸಮಕ್ಷಮ ಕೊಟ್ಟು ಖರೀದಿ ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಆಧಾರದ ಮೇಲೆಯೂ ಸಹ ನಾನು 1 ಎಕರೆ 28 ಗುಂಟೆ ಜಮೀನಿನ ಸ್ವಾಧೀನಕ್ಕೆ ಇಲ್ಲಿಯವರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

13) 2009 ನೇ ಸಾಲಿನಲ್ಲಿ ಮೃತ ಪ್ರತಿವಾದಿ 1 ರವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು ಎಂದರೆ ಸರಿಯಲ್ಲ. 2009 ನೇ ಸಾಲಿನಲ್ಲಿ ರೂ. 2,45,000/- ಹಣ ದೊಡ್ಡ ಮೊತ್ತ ಎಂದರೆ ಸರಿ. ಪ್ರತಿವಾದಿ 1 ರವರು ನನ್ನಿಂದ ಪಡೆದುಕೊಂಡ ರೂ. 2,45,000/- ಹಣವನ್ನು ಮನೆ ಕಟ್ಟಿಸಿಕೊಳ್ಳಲು, ಖಾರ ಕುಟ್ಟುವ ಮಶೀನು, ಜೋಳ, ಗೋದಿ ಬೀಸುವ ಗಿರಣಿಯನ್ನು ಖರೀದಿಸಿರುತ್ತಾರೆ. ಸದರಿ ಖಾರ ಕುಟ್ಟುವ ಮತ್ತು ಜೋಳ, ಗೋದಿ ಬೀಸುವ ಗಿರಣಿಯಿಂದ ಪ್ರತಿವಾದಿ 1 ರವರಿಗೆ ಆದಾಯ ಬರುತ್ತಿತ್ತು ಎಂದರೆ ಸರಿ. ಪ್ರತಿವಾದಿ 1 ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ದೊಡ್ಡ ಪ್ರಮಾಣದ ಕಿರಾಣಿ ಅಂಗಡಿ ಇಟ್ಟುಕೊಳ್ಳಲು ಹಾಗೂ ಇನ್ನೊಂದು ಮನೆ ಕಟ್ಟಲು ಹಣದ ಅವಶ್ಯಕತೆ ಇರುತ್ತದೆ ಎಂದು ಹೇಳಿ ದಾವಾ ಸ್ವತ್ತನ್ನು ಮಾರಾಟ ಮಾಡಲು ತೆಗೆದಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರು ಕಿರಾಣಿ ಅಂಗಡಿ ಮತ್ತು 2 ನೇ ಮನೆ

ಕಟ್ಟಿಸಿದ ಇಸವಿ 2010-2011 ಆಗಿರುತ್ತದೆ. ದಾವಾ ಸ್ವತ್ತಿನಲ್ಲಿಯೇ ಪ್ರತಿವಾದಿ 1 ರವರು ಮನೆ ಮತ್ತು ಕಿರಾಣಿ ಅಂಗಡಿ ಹಾಗೂ ಖಾರ ಕುಟ್ಟುವ ಮಶೀನು, ಹಿಟ್ಟಿನ ಗಿರಣಿ ಇರುತ್ತವೆ ಎಂದರೆ ಸರಿ. ಪ್ರತಿವಾದಿ 1 ರವರ ಹೆಂಡತಿ ನಿರ್ಮಲಾ ಅಲಿಯಾಸ ಅವ್ವಕ್ಕಾ ರವರು ಖಾರ ಕುಟ್ಟುವುದು, ಹಿಟ್ಟು ಬೀಸುವುದು ಮಾಡುತ್ತಾರೆ. ಪ್ರತಿವಾದಿ 1(ಸಿ) ರವರು ದಾವಾ ಸ್ವತ್ತಿನಲ್ಲಿ ಇರುವ ಕಿರಾಣಿ ಅಂಗಡಿಯನ್ನು ನಡೆಸುತ್ತಾರೆ. ದಾವಾ ಸ್ವತ್ತಿನಲ್ಲಿ ಇರುವ ಕಿರಾಣಿ ಅಂಗಡಿಗೆ ಮತ್ತು ಗಿರಣಿಗಳಿಗೆ ಊರಿನ ಜನ ಬಂದು ಖರೀದಿ ಮತ್ತು ಬೀಸಿಕೊಂಡು ಹೋಗುತ್ತಾರೆ ಎಂದರೆ ಸರಿ.

14) ದಾವಾ ಸ್ವತ್ತಿನ ಮೇಲೆ ಪ್ರತಿವಾದಿ 1 ಹಾಗೂ ನನ್ನ ಮತ್ತು ನನ್ನ ಸಹೋದರನ ಮೇಲೆ ಪ್ರತಿವಾದಿ 1(ಎ) ರವರು ಇದೇ ನ್ಯಾಯಾಲಯದಲ್ಲಿ ಅಸಲ ದಾವಾ ಸಂಖ್ಯೆ 629/2010 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಸದರಿ ದಾವೆಯಲ್ಲಿ ರಾಜಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಪ್ರತಿವಾದಿ 1 ರವರು ನಾನು ಸೃಷ್ಟಿಸಿಕೊಂಡ ಖರೀದಿ ಪತ್ರವು ಶೂನ್ಯ ಮತ್ತು ಅನುರ್ಜಿತವಾಗಿರುತ್ತದೆ ಎಂದು ಕೋರಿಕೊಂಡು, ಪ್ರತಿವಾದಿ 1(ಎ) ರವರ ಸ್ವಾಧೀನಾನುಭವದಲ್ಲಿರುವ ಜಮೀನಿಗೆ ಅಡತಡೆ ಮಾಡಕೂಡದು ಎಂದು ಪರಿಹಾರ ಕೋರಿ ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 1 ಎಕರೆ 28 ಗುಂಟೆ ಜಮೀನಿನ ಕುರಿತು ಇದೇ ನ್ಯಾಯಾಲಯದಲ್ಲಿ ಪ್ರತಿವಾದಿ 1 ರವರ ಒತ್ತಾಯಕ್ಕೆ ಮಣಿದು ಪ್ರತಿವಾದಿ 1(ಎ) ರವರು ರಾಜಿ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ.

15) ಈ ದಾವಾ ಸ್ವತ್ತಿನ ಕುರಿತು ನಿಪಿ-1 ರಂತೆ ಮಾಡಿಕೊಂಡ ಕ್ರಯ ಕರಾರು ಪತ್ರದಲ್ಲಿ ಮುಂಗಡ ನೀಡಿರುವುದಾಗಿ ನಮೂದಿಸಿದ ಹಣವನ್ನು ಪ್ರತಿವಾದಿ 1(ಎ) ರವರ ಕಡೆಯಿಂದ ಅಸಲ ದಾವಾ ಸಂಖ್ಯೆ 631/2010 ರ ದಾವೆಯಲ್ಲಿನ ರಾಜಿ ಪತ್ರದಲ್ಲಿ ತಿಳಿಸಿದ 2 ವರ್ಷಗಳ ಒಳಗಾಗಿ ಹಣ ಪಡೆದುಕೊಂಡು ನಿಪಿ-1 ರ ಕ್ರಯ ಕರಾರು ಪತ್ರವನ್ನು ರದ್ದುಪಡಿಸಿಕೊಳ್ಳಲು ನಾನು ಒಪ್ಪಿ ಕೊಂಡಿದ್ದೆ ಎಂದರೆ ಸರಿ. ಸದರಿ ರಾಜಿಯಂತೆ ಪ್ರತಿವಾದಿ 1 (ಎ) ರವರು ನನಗೆ ರೂ. 1,48,000/- ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದರೂ ಸಹ ನಾನು ನಿಪಿ-1 ರ ಕ್ರಯ ಕರಾರು ಪತ್ರವನ್ನು ರದ್ದುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಅಸಲ ದಾವಾ ಸಂಖ್ಯೆ 631/2010 ರಲ್ಲಿನ ರಾಜಿಯಂತೆ ನಾನು ಪ್ರತಿವಾದಿ 1 ಮತ್ತು ಆತನ ಹೆಂಡತಿ ಹಾಗೂ ತಾಯಿಗೆ ನಿಪಿ-1 ರ ಕ್ರಯ ಕರಾರು ಪತ್ರದನ್ವಯ ನಾನು ಮುಂಗಡ ನೀಡಿದ ರೂ. 1,48,000/- ಹಣವನ್ನು ನೀಡಿ, ನಿಪಿ-1 ರ ದಾಖಲೆಯನ್ನು ರದ್ದುಪಡಿಸಿಕೊಳ್ಳಿ ಎಂದು ಅನೇಕ ಸಲ ಕೇಳಿರುತ್ತೇನೆ, ಆಗ ಪ್ರತಿವಾದಿ 1 ಹಾಗೂ ಆತನ ತಾಯಿ ಮತ್ತು ಹೆಂಡತಿ, ಹಾಗೂ ತಂಗಿ ನನಗೆ ಉಳಿದ ಹಣ

ಕೊಟ್ಟು ದಾವಾ ಸ್ವತ್ತನ್ನು ಖರೀದಿ ಮಾಡಿಕೊಳ್ಳಿ ಎಂದು ತಿಳಿಸಿ ತಮಗೆ ಹಣ ಕೊಡುವುದು ಆಗುವುದಿಲ್ಲ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16) ದಿಃ 19-07-2012 ರಂದು ನನ್ನ ಮತ್ತು ಮೃತ ಪ್ರತಿವಾದಿ 1 ರವರ ಮಧ್ಯ ರೂ.200/- ಛಾಪಾ ಕಾಗದದ ಮೇಲೆ ಒಂದು ಒಪ್ಪಂದ ಪತ್ರ ಆಗಿತ್ತು ಎಂದರೆ ಸರಿಯಲ್ಲ. ಸದರಿ ಒಪ್ಪಂದ ಪತ್ರದಲ್ಲಿ ನನ್ನ ಮತ್ತ ಪ್ರತಿವಾದಿ 1 ರವರ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಉಳಿದಿರುವುದಿಲ್ಲ, ಪ್ರತಿವಾದಿ 1 ರವರಿಗೆ ಸೇರಿದ ಯಾವುದೇ ಚೆಕ್ಕು, ವಚನಪತ್ರ ಹಾಗೂ ಯಾವುದೇ ದಾಖಲೆಗಳು ಇರುವುದಿಲ್ಲ, ಒಂದು ವೇಳೆ ಇದ್ದರೆ ಒಪ್ಪಂದ ಪತ್ರವಾದ ದಿನದಿಂದ ರದಾಗುತ್ತವೆ ಎಂದು ಛಾಪಾ ಕಾಗದದ ಮೇಲೆ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ.

17) ದಾವಾಸ್ವತ್ತನ್ನು ಹೊರತುಪಡಿಸಿ ಪ್ರತಿವಾದಿಯರಿಗೆ ಬೇರೆ ಯಾವುದೇ ಜಮೀನುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ಮಾನ್ಯ ಗೌರವಾನ್ವಿತ 1 ನೇ ಅಧಿಕ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಗೋಕಾಕ ಇವರಲ್ಲಿ ಅಸಲ ದಾವಾ ಸಂಖ್ಯೆ 688/2022 ರಂತೆ ದಾವೆ ವಿಚಾರಣಾ ಹಂತದಲ್ಲಿ ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.